**ಕರ್ನಾಟಕ ಸರ್ಕಾರ**
**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**
**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಇ : ಜಂ ನಿ : ಸುಮಪ : 2020–21** **ದಿನಾಂಕ : 16–10–2020**

# ಪತ್ರಿಕಾ ಪ್ರಕಟಣೆ

## ಪಂಡಿತ್ ಶ್ರೀ ವಿನಾಯಕ ತೊರವಿ ಧಾರವಾಡ ಅವರಿಗೆ

## "ರಾಜ್ಯ ಸಂಗೀತ ವಿದ್ವಾನ್" ಪ್ರಶಸ್ತಿ

**ಬೆಂಗಳೂರು, ಅಕ್ಟೋಬರ್ 16 (ಕರ್ನಾಟಕ ವಾರ್ತೆ):**

**2020–21 ನೇ ಸಾಲಿನ ಸಂಗೀತ ವಿಭಾಗದ "ರಾಜ್ಯ ಸಂಗೀತ ವಿದ್ವಾನ್" ಪ್ರಶಸ್ತಿಗೆ ಪಂಡಿತ್ ಶ್ರೀ ವಿನಾಯಕ ತೊರವಿ, ಧಾರವಾಡ ಅವರನ್ನು ಆಯ್ಕೆ ಮಾಡಲಾಗಿದೆ. ಈ ಪ್ರಶಸ್ತಿಯನ್ನು ದಿನಾಂಕ 17–10–2020 ರಂದು ಸಂಜೆ 6–00 ಗಂಟೆಗೆ ಮೈಸೂರು ದಸರಾ ಉತ್ಸವ ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಗಳು, ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಈ ಪ್ರಶಸ್ತಿಯು ರೂ. 5.00 ಲಕ್ಷಗಳು, ಫಲತಾಂಬೂಲ, ಫಲಕ, ಸರಸ್ವತಿ ವಿಗ್ರಹ, ಶಾಲು ಹಾರ, ಪೇಟ ಇವರುಗಳನ್ನು ಒಳಗೊಂಡಿರುತ್ತದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಕಟಣೆ ತಿಳಿಸಿದೆ.**

# Exporters Invited

Bengaluru, October 16 (Karnataka Information)

As per notification of Ministry of Commerce and Industry, (GOI), Director of Horticulture has invited the exporters, who are interested to export Bangalore Rose Onion from Karnataka (Cultivated and procured from Chikkaballapura and Kolar only) .This signature produce shall be allowed to export shipment as per the norms of export policy issued by GDFT notification from Chennai port only. Interested and licenced

exporters (KYC Documents and procedure wise) can submit their requisition along with letter of credit. For more information contact 080-26573391 and website www.horticulturedir.karnataka.gov.in says official press release.

## ಗುಲಾಬಿ, ಈರುಳ್ಳಿಯನ್ನು ರಫ್ತು ಮಾಡಲು ಇಚ್ಚಿಸುವ ರಫ್ತುದಾರರಿಂದ ಆಹ್ವಾನ

**ಬೆಂಗಳೂರು, ಅಕ್ಟೋಬರ್ 16 (ಕರ್ನಾಟಕ ವಾರ್ತೆ) :**

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ, ಭಾರತ ಸರ್ಕಾರ ಇವರ ಆದೇಶದನ್ವಯ ತೋಟಗಾರಿಕೆ ಇಲಾಖೆ ನಿರ್ದೇಶಕರಿಂದ ಕರ್ನಾಟಕದ ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳಲ್ಲಿ ಬೆಳೆದ ಬೆಂಗಳೂರು ಗುಲಾಬಿ, ಈರುಳ್ಳಿಯನ್ನು ರಫ್ತು ಮಾಡಲು ಇಚ್ಚಿಸುವ ರಫ್ತುದಾರರನ್ನು ಆಹ್ವಾನಿಸಲಾಗಿದೆ.

ಈ ಪ್ರಾದೇಶಿಕ ವೈಶಿಷ್ಟ್ಯವುಳ್ಳ ಉತ್ಪನ್ನವನ್ನು ಚೆನ್ನೈ ಬಂದರಿನಿಂದ ಮಾತ್ರ ಡಿಜಿಎಫ್‌ಟಿ ಅಧಿಸೂಚನೆ ಹೊರಡಿಸಿದ ರಫ್ತು ನೀತಿಯ ಮಾನದಂಡಗಳ ಪ್ರಕಾರ ರಫ್ತು ಮಾಡಲು ಅನುಮತಿಸಲಾಗುವುದು.

ಆಸಕ್ತ ಮತ್ತು ಪರವಾನಗಿ ಹೊಂದಿರುವ ರಫ್ತುದಾರರು ಕೆವೈಸಿ ವಿವರಗಳೊಂದಿಗೆ ಮತ್ತು ನಿಯಮಾನಸಾರ ತಮ್ಮ ಕೋರಿಕೆಯನ್ನು ಲೆಟರ್ ಆಫ್ ಕ್ರೆಡಿಟ್ ಜೊತೆಗೆ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಯನ್ನು ದೂರವಾಣಿ ಸಂಖ್ಯೆ: 080–26573391 ಮತ್ತು www.horticulturedir.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದು.